# 2019-20 ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತದ ವತಿಯಿಂದ ಮಾವು ಬೆಳೆಗಾರರು ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಗೆ ಸಹಾಯಧನ ಕಾರ್ಯಕ್ರಮ ಅನುಷ್ಠಾನ ಮಾರ್ಗಸೂಚಿ:

K.S.M.D&M.C.Ltd. Cauvery Bhavan, Bangalore

## I. ಪೀಠಿಕೆ:

ಮಾವಿನ ಹಣ್ಣಿನ ಕೊಯ್ಲು ನಂತರದ ಸಾಗಾಣಿಕೆಯಲ್ಲಿ ಶೇ.15ರಷ್ಟು ನಷ್ಟವಾಗುತ್ತಿದ್ದು, ಈ ನಷ್ಟವನ್ನು ಕಡಿಮೆಗೊಳಿಸಲು ಪ್ಲಾಸ್ಟಿಕ್ ಕ್ರೇಟ್ಸ್ ಉಪಯೋಗಿಸುವುದು ಅತ್ಯವಶ್ಯಕ. ಮಾವು ಬೆಳೆಗಾರರಿಗೆ ಕೊಯ್ಲು ನಂತರ ಚಟುವಟಿಕೆಗಳಿಗೆ ಅವಶ್ಯವಿರುವ ಪ್ಲಾಸ್ಟಿಕ್ ಕ್ರೇಟ್ಸ್ ಒದಗಿಸಲು ನಿಗಮದಿಂದ e-procurement ಮೂಲಕ ಸರಬರಾಜು ಸಂಸ್ಥೆಗಳನ್ನು ಅನುಮೋದಿಸಲಾಗುತ್ತಿದ್ದು, ಅನುಮೋದಿತ ಸರಬರಾಜುದಾರರಿಂದ ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಸುವ ಮಾವು ಬೆಳೆಗಾರರಿಗೆ ನಿಗಮದಿಂದ ಸಹಾಯಧನ ನೀಡಿ ಪ್ರೋತ್ಸಾಹಿಸಲು ಕಾರ್ಯಕ್ರಮ ರೂಪಿಸಲಾಗಿದೆ.

## II. ಫಲಾನುಭವಿಗಳ ಅರ್ಹತೆ:

1. ಫಲಾನುಭವಿಗಳು ಮಾವು ಬೆಳೆಯುವ ರೈತರಾಗಿರಬೇಕು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ತಂದೆ ಅಥವಾ ತಾಯಿ ಹೆಸರಿನಲ್ಲಿ ಜಮೀನಿದ್ದು, ಅವರ ಮರಣ ಹೊಂದಿದ್ದಲ್ಲಿ ಮಾತ್ರ ಗ್ರಾಮ ಲೆಕ್ಕಿಗರಿಂದ ದೃಢೀಕರಿಸಿ ಕುಟುಂಬದ ಇತರೆ ಸದಸ್ಯರಿಂದ ಒಪ್ಪಿಗೆ ಪಡೆದು ತಮ್ಮ ಹೆಸರಿನಲ್ಲಿ ಅರ್ಜಿ ಸಲ್ಲಿಸುವುದು. **ಖಾತೆದಾರರು ಜೀವಂತವಿದ್ದಲ್ಲಿ ಕುಟುಂಬದ ಇತರೆ ಸದಸ್ಯರು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.**
2. ಮಾವು ಬೆಳೆ ವಿಸ್ತೀರ್ಣ ಕನಿಷ್ಟ 0.20 ಹೆ., ರಿಂದ ಗರಿಷ್ಟ 2.00 ಹೆ., ಹೊಂದಿರಬೇಕು.
3. ಮಹಿಳೆಯರ ಹೆಸರಿನಲ್ಲಿ ಖಾತೆ ಹೊಂದಿದ್ದು, ಕುಟುಂಬದ ಇತರೆ ಸದಸ್ಯರ ಹೆಸರಲ್ಲಿ ಅರ್ಜಿ ಸಲ್ಲಿಸಿದಲ್ಲಿ, ಮಾನ್ಯ ಮಾಡಲಾಗುವುದಿಲ್ಲ. ಮಹಿಳೆಯರ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸುವುದನ್ನು ಉತ್ತೇಜಿಸಬೇಕು.
4. **ಫಲಾನುಭವಿ ರೈತರು ತೋಟಗಾರಿಕೆ ಇಲಾಖೆಯ/ಇತರೆ ಅಭಿವೃದ್ಧಿ ಇಲಾಖೆಗಳ ಯಾವುದೇ ಯೋಜನೆ ಅಡಿ ಸಹಾಯಧನ ಪಡೆದಿದ್ದಲ್ಲಿ, ಸದರಿ ಕಾರ್ಯಕ್ರಮದಡಿ ಸಹಾಯಧನ ಪಡೆಯಲು ಅರ್ಹರಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ತೋಟಗಾರಿಕೆ ಇಲಾಖೆಯ ವತಿಯಿಂದ (NOC) ನಿರಾಕ್ಷೇಪಣ ಪತ್ರ ಪಡೆದು ಸಲ್ಲಿಸುವುದು.**
5. ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿದಂತೆ ಸಹಾಯಧನವನ್ನು ಲೆಕ್ಕಚಾರ ಮಾಡಿ ಸಹಾಯಧನಕ್ಕೆ ಶಿಫಾರಸ್ಸು ಮಾಡುವುದು.
6. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ)/ಮಾವು ಅಭಿವೃದ್ಧಿ ಕೇಂದ್ರ ರವರುಗಳು ಮಾವು ನಿಗಮದ ಕಾರ್ಯಕ್ರಮಗಳ ಕುರಿತು ಹೆಚ್ಚಿನ ಪ್ರಚಾರ ಕೈಗೊಳ್ಳಲು ಕ್ರಮವಹಿಸುವುದು.
7. ರೈತ ಮಹಿಳೆಯರಿಗೆ ಆದ್ಯತೆ ನೀಡುವುದು ಹಾಗೂ ಸಣ್ಣ, ಅತೀ ಸಣ್ಣ ಮತ್ತು ಪ.ಜಾ/ಪ.ಪಂ, ಮತ್ತು ಇತರೆ ಎಲ್ಲಾ ವರ್ಗದವರು ಸಹಾಯಧನ ಪಡೆಯಲು ಅರ್ಹರಿರುತ್ತಾರೆ.
8. ಅನುಮೋದಿತ ಸಂಸ್ಥೆಗಳು, ಮಾದರಿ/ದರಗಳನ್ನು ಮಾತ್ರ ಸಹಾಯಧನಕ್ಕೆ ಪರಿಗಣಿಸಲಾಗುವುದು.
9. **ಮಾವು ನಿಗಮದ ವತಿಯಿಂದ 2013-14 ನೇ ಸಾಲಿನಿಂದ ನಿಗಮದ ಅನುಮೋದಿತ ಸಂಸ್ಥೆಗಳಿಂದ ಗರಿಷ್ಟ ಮಿತಿ 2.00 ಹೆ., 200 ಸಂಖ್ಯೆಯ ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಸಿ ಸಹಾಯಧನ ಪಡೆದ ರೈತರು ಅರ್ಹರಿರುವುದಿಲ್ಲ.**

K.S.M.D&M.C.Ltd. * Cauvery Bhavan, Bangalore

III. ಅರ್ಜಿ ಸಲ್ಲಿಸುವ ವಿಧಾನ:

1. ಮಾವು ನಿಗಮದ ವತಿಯಿಂದ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಅನುಮೋದಿತವಾಗಿರುವ ಸಂಸ್ಥೆಗಳಿಂದ ಅನುಮೋದಿತ ಮಾದರಿ / ಸಾಮರ್ಥ್ಯದ ಪ್ಲಾಸ್ಟಿಕ್ ಕ್ರೇಟ್ಸ್ ಗಳಿಗೆ ಸಂಸ್ಥೆವಾರು ನಿಗದಿಪಡಿಸಲಾಗಿರುವ ಎಲ್-1 ದರಗಳನ್ವಯ ಖರೀದಿಸತಕ್ಕದ್ದು.
2. ಅರ್ಜಿ ನಮೂನೆ ಅನುಮೋದಿತ ಸರಬರಾಜುದಾರರ ವಿವರಗಳ ಕುರಿತಂತೆ ಜಿಲ್ಲಾ/ ತಾಲ್ಲೂಕು/ಹೋಬಳಿ ಹಂತದಲ್ಲಿ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹೆಚ್ಚಿನ ಪ್ರಚಾರ ಕೈಗೊಳ್ಳುವುದು.
3. ಸಹಾಯಧನ ಪಡೆಯಲು ನಿಗದಿಪಡಿಸಲಾದ ಅರ್ಜಿ ನಮೂನೆಯೊಂದಿಗೆ ಅಗತ್ಯ ದಾಖಲಾತಿಗಳನ್ನು ಹಾಗೂ ಫಲಾನುಭವಿಯ ಇಚ್ಛಿಸಿದ ಅನುಮೋದಿತ ಸಂಸ್ಥೆ ಹಾಗೂ ಪ್ಲಾಸ್ಟಿಕ್ ಕ್ರೇಟ್ಸ್ ಪ್ರಮಾಣ/ಮಾದರಿ ಅನುಸಾರ ರೈತರ ವಂತಿಕೆ ಮೊತ್ತವನ್ನು ಸಂಗ್ರಹಿಸಿ ವಿವರಗಳನ್ನು ನಮೂದಿಸಿ ಸಂಬಂಧಪಟ್ಟ ತಾಲ್ಲೂಕು ಹಿಸತೋನಿ (ಜಿಪಂ) ರವರು ಹಾಗೂ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ), ರವರುಗಳು ದೃಢೀಕರಿಸಿ **ಸರಬರಾಜು ಬೇಡಿಕೆ (Supply Indent)** ಪ್ರಸ್ತಾವನೆಯನ್ನು ಮಾವು ನಿಗಮ ಕೇಂದ್ರ ಕಚೇರಿಗೆ ಬೆಂಗಳೂರಿಗೆ ಸಲ್ಲಿಸುವುದು
4. **ಯಾವುದೇ ಕಾರಣಕ್ಕೂ ಜಿಲ್ಲಾ/ತಾಲ್ಲೂಕು ವತಿಯಿಂದ ನೇರವಾಗಿ ಸರಬರಾಜು ಬೇಡಿಕೆಯನ್ನು (Supply Indent) ಅನುಮೋದಿತ ಸರಬರಾಜು ಸಂಸ್ಥೆಗಳಿಗೆ ಸಲ್ಲಿಸಬಾರದು.**
5. **ಸರಬರಾಜು ಬೇಡಿಕೆ (Supply Indent) ಅನ್ನು ಮಾವು ನಿಗಮಕ್ಕೆ ಸಲ್ಲಿಸದೇ ನೇರವಾಗಿ ಅನುಮೋದಿತ ಸಂಸ್ಥೆಗಳಿಂದ ಖರೀದಿಸಿದ ಪ್ಲಾಸ್ಟಿಕ್ ಕ್ರೇಟ್ಸ್ ಗಳನ್ನು ಸಹಾಯಧನಕ್ಕೆ ಪರಿಗಣಿಸಲಾಗುವುದಿಲ್ಲ.**
6. ಸಲ್ಲಿಸಲಾಗುವ ಪ್ರಸ್ತಾವನೆಯ ದಾಖಲಾತಿಗಳನ್ನು ಮಾರ್ಗಸೂಚಿಯನ್ವಯ ಪರಿಶೀಲಿಸಿ ಅರ್ಹ ಫಲಾನುಭವಿಗಳ ವಿವರಗಳೊಂದಿಗೆ ಮಾವು ನಿಗಮದ ವತಿಯಿಂದ ಫಲಾನುಭವಿಗಳು ಇಚ್ಛಿಸಿದ ಅನುಮೋದಿತ ಸರಬರಾಜು ಸಂಸ್ಥೆಗಳಿಗೆ ಜಿಲ್ಲಾ/ತಾಲ್ಲೂಕು/ಫಲಾನುಭವಿವಾರು ಸರಬರಾಜು ಬೇಡಿಕೆ (Purchase order) ನ್ನು ನಿಗಮದ ವತಿಯಿಂದ ಸಲ್ಲಿಸಲಾಗುವುದು.
7. ಸರಬರಾಜು ಬೇಡಿಕೆ (Supply Indent) ಅನುಸಾರ, ಸರಬರಾಜು ಸಂಸ್ಥೆಯ e-way bill, Delivery note/challan ಹಾಗೂ Invoice ನೊಂದಿಗೆ ಸಂಬಂಧಪಟ್ಟ ತಾಲ್ಲೂಕು ಹಿಸತೋನಿ (ಜಿಪಂ) / ಇಲಾಖಾ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಫಲಾನುಭವಿಗಳಿಗೆ ವಿತರಿಸಿ ಸಹಿ ಪಡೆದು ಹಾಗೂ ಹಿಸತೋನಿ/ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ), ರವರು ದೃಢೀಕರಿಸಿ ಅನುಮೋದಿತ ಸರಬರಾಜು ಸಂಸ್ಥೆಗಳಿಗೆ/ಫಲಾನುಭವಿಗಳಿಗೆ ಮಾವು ನಿಗಮದ ವಂತಿಕೆ / ಸಹಾಯಧನ ಮೊತ್ತವನ್ನು ಪಾವತಿಸಲು ಮಂಜೂರಾತಿ ಕೋರಿ ಸಲ್ಲಿಸುವುದು.
8. ಫಲಾನುಭವಿವಾರು Indent ಅನುಸಾರ ವಿತರಣೆ ಜವಾಬ್ದಾರಿಯು ಸರಬರಾಜು ಸಂಸ್ಥೆಯದ್ದಾಗಿರುತ್ತದೆ.
9. **ರೈತರು/ಫಲಾನುಭವಿಗಳು ಬೇಡಿಕೆಯನ್ನು ಕನಿಷ್ಟ 15 ದಿನ ಮುಂಗಡವಾಗಿ ಸಲ್ಲಿಸಬೇಕು.**

IV. **ಸಲ್ಲಿಸಬೇಕಾದ ದಾಖಲಾತಿಗಳು :**

1. ಅರ್ಜಿಯೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ. ಹಾಗೂ ಮೊಬೈಲ್ ದೂರವಾಣಿ ಸಂಖ್ಯೆ ವಿವರಗಳು
2. 2019-20ನೇ ಸಾಲಿನ ಪಹಣಿ/RTC – ಪ್ರತಿಯನ್ನು ಸಲ್ಲಿಸುವುದು.
3. **ಪಹಣಿಯಲ್ಲಿ ಮಾವು ಬೆಳೆ, ವಿಸ್ತೀರ್ಣ ನಮೂದಿಸಿರಬೇಕು ಪಹಣಿಯಲ್ಲಿ ನಮೂದಿಲ್ಲದಿದ್ದಲ್ಲಿ, ಬೆಳೆ ದೃಢೀಕರಣ ಪತ್ರ ಸಲ್ಲಿಸುವುದು.**
4. **ಆಧಾರ್ ಕಾರ್ಡ್ /ಮತದಾರರ ಗುರುತಿನ ಚೀಟಿ ಕಡ್ಡಾಯವಾಗಿ ಸಲ್ಲಿಸುವುದು.**
5. ಜಾತಿ ಪ್ರಮಾಣ ಪತ್ರ (ಪ.ಜಾ/ಪ.ಪಂ ವರ್ಗ ಆಗಿದ್ದಲ್ಲಿ ಮಾತ್ರ)
6. ಬ್ಯಾಂಕ್ ಖಾತೆಯ ವಿವರಗಳು (IFSC ಕೊಡ್‌ನೊಂದಿಗೆ) ಬ್ಯಾಂಕ್ ಪಾಸ್ ಪುಸ್ತಕದ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸುವುದು (ಸಹಾಯಧನ ಮೊತ್ತ ಫಲಾನುಭವಿಗೆ ಪಾವತಿಸಬೇಕಾದಲ್ಲಿ).

7. ಫಲಾನುಭವಿಯ ಪ್ಲಾಸ್ಟಿಕ್ ಕ್ರೇಟ್ಸ್ ದಾಸ್ತಾನೊಂದಿಗೆ ಛಾಯಚಿತ್ರವನ್ನು ಕಡ್ಡಾಯವಾಗಿ ಸಲ್ಲಿಸುವುದು ಇಲ್ಲವಾದಲ್ಲಿ ಸಹಾಯಧನಕ್ಕೆ ಪರಿಗಣಿಸಲಾಗುವುದಿಲ್ಲ.
8. ತೋಟಗಾರಿಕೆ ಇಲಾಖೆ ವತಿಯಿಂದ ಸಹಾಯಧನ ಪಡೆದಿಲ್ಲವೆಂದು ನೀರಾಕ್ಷೇಪಣಾ (NOC)ಪತ್ರ ಸಲ್ಲಿಸುವುದು.

V. ಸಹಾಯಧನ ವಿವರ:

1. ಅನುಮೋದಿತ ಸರಬರಾಜುದಾರ ಸಂಸ್ಥೆಗಳ ವಿವಿಧ ವಿಶಿಷ್ಠತೆಯ 15 ಕೆ.ಜಿ. ಮತ್ತು 20 ಕೆ.ಜಿ. ಸಾಮರ್ಥ್ಯದ ಪ್ಲಾಸ್ಟಿಕ್ ಕ್ರೇಟ್ಸ್‌ನ ಅನುಮೋದಿತ ಎಲ್-1 ದರಗಳಿಗೆ ನಿಗಮದ ವಂತಿಕೆ ಶೇ60/90 ರಷ್ಟು ಸಹಾಯಧನ ನೀಡಲಾಗುವುದು. ಪ್ರತಿ ಫಲಾನುಭವಿಗೆ/ಕುಟುಂಬಕ್ಕೆ ಮಾವು ಬೆಳೆ ಕನಿಷ್ಟ 0.20 ರಿಂದ ಗರಿಷ್ಟ 2.00 ಹೆ. ವಿಸ್ತೀರ್ಣಕ್ಕೆ ಗರಿಷ್ಠ 200 ಸಂಖ್ಯೆ ಪ್ಲಾಸ್ಟಿಕ್ ಕ್ರೇಟ್ಸ್ ಗಳಿಗೆ ಸಹಾಯಧನವನ್ನು ಮಿತಿಗೊಳಿಸಲಾಗಿದೆ.
2. **ಪ.ಜಾ/ಪ.ಪಂ ವರ್ಗಕ್ಕೆ-90% ಮತ್ತು ಇತರೆ-60% ರಂತೆ ಅನುಮೋದಿತ ಸರಬರಾಜುದಾರ ವಿವಿದ ಮಾದರಿಗಳ ಎಲ್-1 ದರಗಳಿಗೆ ಸಹಾಯಧನಕ್ಕೆ ಪರಿಗಣಿಸಲಾಗುವುದು.**
3. ಮಾವು ನಿಗಮದ ವತಿಯಿಂದ 2013-14 ನೇ ಸಾಲಿನಿಂದ ಗರಿಷ್ಟ ಮಿತಿ ಸಂಖ್ಯೆಯ ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಸಿ ಸಹಾಯಧನ ಪಡೆದ ರೈತರು ಅರ್ಹರಿರುವುದಿಲ್ಲ.
4. ರೈತರ ವಂತಿಕೆ ಶೇ.40/10 ರಷ್ಟು ಪಾವತಿಸಿ ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಸುವ ಫಲಾನುಭವಿಗಳ ನಿಗಮದ ವಂತಿಕೆ ಶೇ.60/90 ರಷ್ಟು ಸಹಾಯಧನವನ್ನು ಸರಬರಾಜುದಾರರಿಗೆ ಪಾವತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅಥವಾ ಒಟ್ಟಾರೆ ಎಲ್-1 ದರಗಳಂತೆ ಪೂರ್ಣ ಮೊತ್ತ ಪಾವತಿಸಿ ಖರೀದಿಸಿದ ಫಲಾನುಭವಿಗಳಿಗೆ ನಿಗಮದ ವಂತಿಕೆ ಮೊತ್ತವನ್ನು ಶೇ.60/90 ರಷ್ಟು ಸಹಾಯಧನವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಜಮೆ ಮಾಡಲಾಗುವುದು.

ಸಂ:ಕರಾಮಾಅ&ಮಾನಿನಿ.ವ್ಯನಿ.ಸತೋನಿ2/29/2019-20.

ವ್ಯವಸ್ಥಾಪಕ ನಿರ್ದೇಶಕರು
ಮಾವು ಅಭಿವೃದ್ಧಿ ನಿಗಮ, ಬೆಂ

K.S.M.D&M.C.Ltd. Cauvery Bhavan, Bangalore

ಕರ್ನಾಟಕ ರಾಜ್ಯ ಮಾವು ಅಭಿವೃದ್ದಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ
2019-20 ನೇ ಸಾಲಿನ ಪ್ಲಾಸ್ಟಿಕ್ ಕ್ರೇಟ್ಸ್ ಸಹಾಯಧನ ಪಡೆಯಲು
ಫಲಾನುಭವಿಗಳು ಸಲ್ಲಿಸಬೇಕಾದ ವಿವರಗಳು

## ಅರ್ಜಿ ನಮೂನೆ-ಎ

| ಕ್ರ.ಸಂ | ಮಾಹಿತಿಯ ವಿವರ | |
|---|---|---|
| 1. | ರೈತರ ಹೆಸರು | |
| 2. | ತಂದೆಯ ಹೆಸರು, ಪೂರ್ಣ ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆ | |
| 3. | ವರ್ಗ | |
| 4. | ಸರ್ವೆ ನಂ. | |
| 5. | ಮಾವು ಬೆಳೆ ವಿಸ್ತೀರ್ಣ (ಹೆ.,) | |
| | ತಳಿಗಳು | |
| 6. | ಮಾವು ಬೆಳೆ ಇರುವ ಗ್ರಾಮ, | |
| | ಹೋಬಳಿ, | |
| | ತಾಲ್ಲೂಕು | |
| 7. | ಲಗತ್ತಿಸಬೇಕಾದ ಅಗತ್ಯ ದಾಖಲಾತಿಗಳು | ಪಹಣಿ, ಬೆಳೆ ಧೃಢೀಕರಣ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್/ಗುರುತಿನ ಚೀಟಿ, ಬ್ಯಾಂಕ್ ಖಾತೆ ಜೆರಾಕ್ಸ್ ಪ್ರತಿ |
| 8. | ಪ್ಲಾಸ್ಟಿಕ್ ಕ್ರೇಟ್ಸ್ ಖರೀದಿಸಿದ ವಿವರ /ಸರಬರಾಜುದಾರ ಸಂಸ್ಥೆ ಹೆಸರು | ನೀಲ ಕಮಲ್ / ಸಮೃದ್ದಿ ಡೀಲರ್ಸ್ |
| | ಮಾದರಿ ಮತ್ತು ಸಾಮರ್ಥ್ಯ | |
| 9. | ಒಟ್ಟು ಖರೀದಿಸಿದ ಪ್ಲಾಸ್ಟಿಕ್ ಕ್ರೇಟ್ಸ್‌ಗಳ ಸಂಖ್ಯೆ | |
| 10. | ಪಾವತಿಸಲಾದ ರೈತರ ವಂತಿಕೆ ಮೊತ್ತ ರೂ. (ಶೇ.40/10%). | |
| 11. | ಪಾವತಿಸಬೇಕಾದ ಸಹಾಯಧನ ವಿವರ | ರೈತರ ಖಾತೆಗೆ/ಸರಬರಾಜುದಾರ ಸಂಸ್ಥೆ |
| 12. | ಫಲಾನುಭವಿಯ ಹೆಸರಿನಲ್ಲಿರುವ ಬ್ಯಾಂಕ್ ಖಾತೆ ಸಂಖ್ಯೆ, IFSC Code ಮತ್ತು ಬ್ಯಾಂಕಿನ ಅಂಚೆ ವಿಳಾಸ (ರೈತರ ಖಾತೆಗೆ ಪಾವತಿಸಬೇಕಾದಲ್ಲಿ) | |
| 13. | ನಿಗಮದ ವಂತಿಕೆ ಶೇ. (ಶೇ.60/90%). ಸಹಾಯಧನ ಕೋರಿರುವ ಮೊತ್ತ | |
| 14. | Indent/Po No. ವಿವರಗಳು. | |

ಷರಾ : ರೈತರ ವಂತಿಕೆ ಮೊತ್ತವನ್ನು ಕಡ್ಡಾಯವಾಗಿ ಸರಬರಾಜುದಾರರಿಗೆ ವಿತರಣೆ ಆದೇಶ (Supply order) ನೀಡಿದ ನಂತರ ಫಲಾನುಭವಿಯು ಪಾವತಿಸತಕ್ಕದ್ದು.

**ರೈತರ ಸಹಿ**
**ಪೂರ್ಣ ಹೆಸರಿನೊಂದಿಗೆ**

ಪು.ತಿ.ನೋ.

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ
2019-20 ನೇ ಸಾಲಿನ ಪ್ಲಾಸ್ಟಿಕ್ ಕ್ರೇಟ್ಸ್ ಸಹಾಯಧನ ಪಡೆಯಲು
ಪರಿಶೀಲನಾ ದೃಢೀಕರಣ

_______________ ತಾಲ್ಲೂಕಿನ __________ ಹೋಬಳಿ__________ ಗ್ರಾಮದ ವಾಸಿಯಾದ ಶ್ರೀ _______________ ರವರು __________ ಗ್ರಾಮದ ಸರ್ವೆ ನಂಬರ್ ನಲ್ಲಿ ____________ ವಿಸ್ತೀರ್ಣದ ಮಾವಿನ ತೋಟ ಹೊಂದಿದ್ದು, 2018-19 ನೇ ಸಾಲಿನ ಮಾವು ನಿಗಮದ ವತಿಯಿಂದ _____ ಸಂಖ್ಯೆಯ ಪ್ಲಾಸ್ಟಿಕ್ ಕ್ರೇಟ್ಸ್‌ಗಳನ್ನು ರೈತರ ವಂತಿಕೆ ಶೇ.(40/10 ರಷ್ಟು) ರೂ. ______ ಪಾವತಿಸಿ ಖರೀದಿಸಲಾಗಿದ್ದು,

ಸದರಿ ಫಲಾನುಭವಿಗಳ ನಿಗಮದ ವಂತಿಕೆ ಸಹಾಯಧನ ಮೊತ್ತವನ್ನು ಶೇ.(60/90 ರಷ್ಟು) ರೂ.__________ (ಪದಗಳಲ್ಲಿ ____________________) ಮಾವು ನಿಗಮದ ವತಿಯಿಂದ _____________ (ಮಾವು ಬೆಳೆಗಾರರಿಗೆ/ಸರಬರಾಜುದಾರ) ಸಂಸ್ಥೆಗೆ ಸರಬರಾಜು ನಂತರ ಸಂದಾಯ ಮಾಡಲು Indent Request/Purchase order ಮುಖಾಂತರ ಸರಬರಾಜು ಮಾಡಲು ಅರ್ಜಿ ನಮೂನೆ ಅನುಬಂಧ-1 ಹಾಗೂ 2 ರಲ್ಲಿ ಮಾಹಿತಿಯನ್ನು ನಮೂದಿಸಿ ಈ ಮೂಲಕ ದೃಢೀಕರಿಸಿದೆ.

**ಫಲಾನುಭವಿಯ ಸಹಿ**

ಮಾವು ನಿಗಮದ ವತಿಯಿಂದ 2015-16, 2016-17, 2017-18, ಮತ್ತು 2018-19 ನೇ ಸಾಲಿನಲ್ಲಿ ಪ್ಲಾಸ್ಟಿಕ್ ಕ್ರೇಟ್ಸ್‌ಗಳಿಗೆ ಗರಿಷ್ಠ 2.00 ಹೆ., 200 ಸಂಖ್ಯೆಯ ಮೀರಿ ಸಹಾಯಧನ ಪಡೆದಿಲ್ಲವೆಂದು ಮತ್ತು ತೋಟಗಾರಿಕೆ ಇಲಾಖೆಯಿಂದ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದಿಲ್ಲವೆಂದು ದೃಢೀಕರಿಸಿರುತ್ತೇನೆ ಅಥವಾ ______ ಸಾಲಿನಲ್ಲಿ ______ ಸಂಖ್ಯೆಯ ಪ್ಲಾಸ್ಟಿಕ್ ಕ್ರೇಟ್ಸ್‌ಗಳಿಗೆ ಸಹಾಯಧನ ಪಡೆಯಲಾಗಿರುತ್ತದೆ.

ದಿನಾಂಕ:

ಸ್ಥಳ :

ಸಹಾಯಕ ತೋಟಗಾರಿಕೆ ಅಧಿಕಾರಿ
__________ ರೈತ ಸಂಪರ್ಕ ಕೇಂದ್ರ,

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಜಿಪಂ), __________ ತಾಲ್ಲೂಕು

## ಅನುಬಂಧ–1

**2019–20 ನೇ ಸಾಲಿನ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ ಕಾರ್ಟುನ್ ಬಾಕ್ಸ್/ಪ್ಲಾಸ್ಟಿಕ್ ಕ್ರೇಟ್ಸ್ ಒದಗಿಸಲು/ಸಹಾಯಧನ ಪಡೆಯಲು**

## Indent Request/Purchase order

**ಕಛೇರಿ ಉಪಯೋಗಕ್ಕಾಗಿ ಮಾತ್ರ**

| ಕ್ರ.ಸಂ. | ಫಲಾನುಭವಿಯ ಹೆಸರು & ವಿಳಾಸ | ಸರ್ವೆ ನಂ. | ವಿಸ್ತೀರ್ಣ (ಹೆ) | ಖರೀದಿಸಲಾಗುವ ಪ್ರಮಾಣ ಸಂಖ್ಯೆ | ಸರಬರಾಜು ಸಂಸ್ಥೆ | ಷರಿಕರ |
|---|---|---|---|---|---|---|
| 01 | | | | | | |
| 02 | | | | | | |
| 03 | | | | | | |

ಸಹಿ

ತೋಉನಿ/ಹಿಸತೋನಿ (ಜಿಪಂ)

## ಅನುಬಂಧ-2

**2019-20 ನೇ ಸಾಲಿನ ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿ., ವತಿಯಿಂದ ಕಾರ್ಟನ್ ಬಾಕ್ಸ್/ಪ್ಲಾಸ್ಟಿಕ್ ಕ್ರೇಟ್ಸ್ ಒದಗಿಸಲು/ಸಹಾಯಧನ ಪಡೆಯಲು**

### ಘೋಷ್ವಾರೆ

(ಪ್ರತಿ ಭಾರಿಯು ಪ್ರತ್ಯೇಕವಾಗಿ ನಮೂದಿಸಿ ಅರ್ಜಿ ನಮೂನೆಯೊಂದಿಗೆ ಸಲ್ಲಿಸತಕ್ಕದ್ದು)
ಕಛೇರಿ ಉಪಯೋಗಕ್ಕಾಗಿ ಮಾತ್ರ

| | | |
|---|---|---|
| Indent/Po No. | | |
| ತಾಲ್ಲೂಕು | | |
| ಜಿಲ್ಲೆ | | |
| ಒಟ್ಟು ಫಲಾನುಭವಿಗಳ ಸಂಖ್ಯೆ | | |
| ಒಟ್ಟು ಅವಶ್ಯವಿರುವ ಪ್ಲಾಸ್ಟಿಕ್ ಕ್ರೇಟ್ಸ್ ಸಂಖ್ಯೆ | | |
| ಸರಬರಾಜು ಸಂಸ್ಥೆ1 | ಫಲಾನುಭವಿಗಳ ಸಂಖ್ಯೆ | ಪ್ರಮಾಣ ಸಂಖ್ಯೆ |
| | | |
| ಸರಬರಾಜು ಸಂಸ್ಥೆ2 | ಫಲಾನುಭವಿಗಳ ಸಂಖ್ಯೆ | ಪ್ರಮಾಣ ಸಂಖ್ಯೆ |
| | | |

ಸಹಿ

ತೋಉನಿ/ಹಿಸತೋನಿ (ಜಿಪಂ)

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.,) ಬೆಂಗಳೂರು
(ಕರ್ನಾಟಕ ಸರ್ಕಾರ ಒಂದು ಉದ್ಯಮ)
KSMD&MCL
'ಎಫ್' ಬ್ಲಾಕ್, 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009, ದೂ: 080–22236837

ಸಂ: ಕರಾಮಾಅ&ಮಾನಿನಿ/ವ್ಯನಿ/ಸತೋನಿ2/60/2019–20 ದಿನಾಂಕ 06–03–2020

## ಕಛೇರಿ ಆದೇಶ

**ವಿಷಯ:** 2019-20 ನೇ ಸಾಲಿನ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಎಲ್-1 ದರಗಳಿಗೆ ಪ್ಲಾಸ್ಟಿಕ್ ಕ್ರೇಟ್ಸ್ ಸರಬರಾಜು ಮಾಡಲು ಎಂಪ್ಯಾನಲ್ ಸಂಸ್ಥೆಗಳನ್ನು ಗುರುತಿಸಲು ಟೆಂಡರ್ ಅನುಮೋದಿಸುವ ಕುರಿತು.

**ಉಲ್ಲೇಖ:**
1) ಟೆಂಡರ್ ಪ್ರಕಟಣೆ ಸಂ: ಕರಾಮಾಅ&ಮಾನಿನಿ/ತೋಉನಿ/ಹೊ/34/2019-20, ದಿ:01.02.2020.
2) ದರ ಸಮಾಲೋಚನಾ ಸಭೆ ದಿ:04.03.2020.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2019-20 ನೇ ಸಾಲಿನಲ್ಲಿ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ, ಬೆಂಗಳೂರು ರವರ ವತಿಯಿಂದ ರಾಜ್ಯದ ಮಾವು ಬೆಳೆಗಾರರಿಗೆ ಕೊಯ್ಲು ನಂತರದ ಚಟುವಟಿಕೆಗಳಿಗೆ ಅವಶ್ಯವಿರುವ ಪ್ಲಾಸ್ಟಿಕ್ ಕ್ರೇಟ್ಸ್ ಗಳನ್ನು ಸರಬರಾಜು ಮಾಡಲು 15 ಮತ್ತು 20 ಕೆ. ಜಿ. ಸಾಮರ್ಥ್ಯ ವಿವಿಧ ಮಾದರಿಗಳಿಗೆ (Model) ಎಲ್-1 ದರಗಳನ್ನು ನಿಗದಿಪಡಿಸಿ ಸರಬರಾಜು ಸಂಸ್ಥೆಗಳನ್ನು ಗುರುತಿಸಲು ಮಾವು ಅಭಿವೃದ್ಧಿ ಕೇಂದ್ರ, ಹೊಗಳಗೆರೆ, ಶ್ರೀನಿವಾಸಪುರ ತಾ, ಕೋಲಾರ ಜಿಲ್ಲೆ ರವರು ಉಲ್ಲೇಖ(1) ರಲ್ಲಿ ಇ ಟೆಂಡರ್ ನ್ನು ಆಹ್ವಾನಿಸಲಾಗಿರುತ್ತದೆ.

ಅದರಂತೆ, ಟೆಂಡರ್ ಬಿಡ್ ನಲ್ಲಿ ಭಾಗವಹಿಸಿದ ಸಂಸ್ಥೆಗಳನ್ನು ಉಲ್ಲೇಖ(2) ರಲ್ಲಿ ದರ ಸಮಾಲೋಚನಾ (Rate Negotiation) ಸಭೆಯಲ್ಲಿ ವಿವಿದ ಸಾಮರ್ಥ್ಯ (Capacity), ವಿವಿಧ ಮಾದರಿಗಳಿಗೆ (Model) ಎಲ್-1 ದರಗಳನ್ನು ಸಂಸ್ಥೆವಾರು ಅಂತಿಮಗೊಳಿಸಿ, ಅದರಂತೆ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಸಹಾಯಧನದಲ್ಲಿ ಪ್ಲಾಸ್ಟಿಕ್ ಕ್ರೇಟ್ಸ್ ಸರಬರಾಜು ಮಾಡಲು ಎಂಪ್ಯಾನಲ್ ಮಾಡಲಾದ ಸಂಸ್ಥೆಗಳ ವಿವಿಧ ಮಾದರಿಗಳಿಗೆ ಅನುಗುಣವಾಗಿ ನಿಗದಿಪಡಿಸಲಾದ ಎಲ್-1 ದರಗಳನ್ನು ಅನುಬಂಧ (1)ರಲ್ಲಿ ಮತ್ತು ರೈತರ ವಂತಿಕೆ ಮತ್ತು ನಿಗಮದ ವಂತಿಕೆ ಸಹಾಯಧನ ವಿವರಗಳನ್ನು ಅನುಬಂಧ(2) ರಲ್ಲಿ ವಿವರಿಸಿದಂತೆ ಅನುಮೋದಿಸಲಾಗಿದೆ. ಈ ದರಗಳು ದಿನಾಂಕ:30.07.2021 ರ ವರೆಗೆ ಜಾರಿಯಲ್ಲಿರುತ್ತದೆ.

ಲಗತ್ತು: ಮಾರ್ಗಸೂಚಿ, ಅರ್ಜಿ ನಮೂನೆ , ಅನುಬಂಧ-I ಅನುಬಂಧ-II ಮತ್ತು Indent /Purchase order ನಮೂನೆಗಳು.

ವ್ಯವಸ್ಥಾಪಕ ನಿರ್ದೇಶಕರು
ಮಾವು ಅಭಿವೃದ್ಧಿ ನಿಗಮ, ಬೆಂ

ಪ್ರತಿಯನ್ನು :

1) ಎಲ್ಲಾ ತೋಟಗಾರಿಕೆ ಅಪರ ನಿರ್ದೇಶಕರು/ಜಂಟಿ ನಿರ್ದೇಶಕರು, ಲಾಲ್ ಬಾಗ್, ಬೆಂಗಳೂರು ರವರ ಮಾಹಿತಿಗಾಗಿ
2) ಎಲ್ಲಾ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ), ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ.
3) ತೋಟಗಾರಿಕೆ ಉಪ ನಿರ್ದೇಶಕರು ಮಾವು ಅಭಿವೃದ್ಧಿ ಕೇಂದ್ರ ಹೊಗಳಗೆರೆ/ಮಾಡಿಕೆರೆ ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ
4) M/s Nilakamal Pvt. Ltd., Bengaluru ರವರ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ (ಮೊ. ನಂ. +919742904333/+919742268803).
5) ಸಿದ್ದಾರೂಢ ತೋಟಗಾರಿಕೆ ಬೆಳೆಗಾರರ ಸಹಕಾರ ಸೊಸೈಟಿ, ಬೆಳಗಾವಿ ಜಿಲ್ಲೆ ಗೋಕಾಕ ತಾ, ತುಕ್ಕಾನಟ್ಟಿ (M/S Samrudhi Dealer), ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ (ಮೊ. ನಂ. +918971551009/+919148280930).
6) ಕಛೇರಿ ಪತ್ರ.

E:\2019-20 ADH-2\Tender Document 2019-20\Crate Sand Box Tender Docu 2019-20\Plastic Crates Order 2019-20.Docx

# Annexure-I

2019-20 ನೇ ಸಾಲಿನ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಎಲ್-1 ದರಗಳಿಗೆ ಪ್ಲಾಸ್ಟಿಕ್ ಕ್ರೇಟ್ಸ್ ಸರಬರಾಜು ಮಾಡಲು ಎಂಪ್ಯಾನಲ್ ಸಂಸ್ಥೆಗಳ ವಿವಿದ ಸಾಮರ್ಥ್ಯ, ಮಾದರಿಗಳಿಗೆ ನಿಗದಿಪಡಿಸಲಾಗಿರುವ ದರ ವಿವರಗಳು

| Sl No | Item Name | Categery Code | Make | Crate weight in KGs | Description (Length MM)- outer | | | | |
|---|---|---|---|---|---|---|---|---|---|
| | | | | | Model | L | W | H | Price/ unit (Rs Incl all taxes) |
| 1 | Plastic Crates 15-20 kg capacity-Stackable | PCN-1 | Nilkamal Limited | 1.50-1.80 | JBC: 53300 DWBJ | 542 | 360 | 300 | 285.00 |
| 2 | Plastic Crates 20 kg capacity-Stackable | PCN-2 | Nilkamal Limited | 1.80-2.00 | JBC53305 | 542 | 360 | 300 | 325.00 |

| Sl No | Item Name | Categery Code | Make | Crate weight in KGs | Description (Length MM) - outer | | | | Price/ unit (Rs Incl all taxes) |
|---|---|---|---|---|---|---|---|---|---|
| | | | | | Model | L | W | H | |
| 1 | Plastic Crates 15 kg Capacity - Stackable | PCS-3 | Samruddhi Dealers | 1.50-1.80 | W:1500 | 494 | 326 | 250 | 285.00 |
| 2 | Plastic Crates 20 kg Capacity - Stackable | PCS-4 | Samruddhi Dealers | 1.80-2.00 | W:1899 | 540 | 340 | 287 | 365.00 |

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ & ಮಾರುಕಟ್ಟೆ ನಿಗಮ (ನಿ.)
'ಎಫ್' ಬ್ಲಾಕ್, 2ನೇ ಮಹಡಿ,
ಕಾವೇರಿ ಭವನ, ಬೆಂಗಳೂರು-09

## ಅನುಬಂಧ-II

**2019-20 ನೇ ಸಾಲಿನ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವತಿಯಿಂದ ಎಲ್-1 ದರಗಳಿಗೆ ಪ್ಲಾಸ್ಟಿಕ್ ಕ್ರೇಟ್ಸ್ ಸರಬರಾಜು ಮಾಡಲು ಎಂಪ್ಯಾನಲ್ ಸಂಸ್ಥೆಗಳ ವಿವಿದ ಸಾಮರ್ಥ್ಯ, ಮಾದರಿಗಳಿಗೆ ನಿಗದಿಪಡಿಸಲಾಗಿರುವ ದರಗಳಿಗೆ ರೈತರ ವಂತಿಕೆ ಮತ್ತು ನಿಗಮದ ವಂತಿಕೆ ಭರಿಸಬೇಕಾದ ವಿವರಗಳು**

| Capacity (KG) | Crate weight range (KG) | Eligible Category Types/Code | Price/ unit (Rs Incl all taxes) | L-1 Company | ಸಾಮಾನ್ಯ ವರ್ಗದ ಸಹಾಯಧನ ವಿವರ (ಪ್ರತಿ ಕ್ರೇಟ್ಸ್ ಗೆ) | | ಪ.ಜಾ & ಪ.ಪಂ ವರ್ಗದ ಸಹಾಯಧನ ವಿವರ (ಪ್ರತಿ ಕ್ರೇಟ್ಸ್ ಗೆ ) ರೂ.ಗಳಲ್ಲಿ | | ಸಾಮಾನ್ಯ ವರ್ಗದ ಸಹಾಯಧನ ವಿವರ (ಪ್ರತಿ ಕ್ರೇಟ್ಸ್ ಗೆ) ರೂ.ಗಳಲ್ಲಿ | | ಪ.ಜಾ & ಪ.ಪಂ ವರ್ಗದ ಸಹಾಯಧನ ವಿವರ (ಪ್ರತಿ ಕ್ರೇಟ್ಸ್ ಗೆ) ರೂ.ಗಳಲ್ಲಿ | |
|---|---|---|---|---|---|---|---|---|---|---|---|---|
| | | | | | ರೈತರ ವಂತಿಕೆ ಶೇ.40% | ಮಾವು ನಿಗಮದ ವಂತಿಕೆ ಶೇ. 60% | ರೈತರ ವಂತಿಕೆ ಶೇ.10% | ಮಾವು ನಿಗಮದ ವಂತಿಕೆ ಶೇ.90% | ರೈತರ ವಂತಿಕೆ ಶೇ.40% | ಮಾವು ನಿಗಮದ ವಂತಿಕೆ ಶೇ. 60% | ರೈತರ ವಂತಿಕೆ ಶೇ.10% | ಮಾವು ನಿಗಮದ ವಂತಿಕೆ ಶೇ. 90% |
| | | | | | Samruddhi Dealer | | | | Nilkamal Ltd | | | |
| 15 KG | From 1.50 to 1.80 | PCS - 3 | 285.00 | *Samruddhi Dealer | 114.00 | 171.00 | 28.50 | 256.50 | | | | |
| | From 1.50 to 1.80 | PCN -1 | 285.00 | Nilkamal Ltd | | | | | 114.00 | 171.00 | 28.50 | 256.50 |
| 20 KG | From 1.80 to 02.00 | PCN - 2 | 325.00 | Nilkamal Ltd | | | | | 130.00 | 195.00 | 32.50 | 292.50 |
| | From 1.80 to 2.00 | PCS- 4 | 365.00 | *Samruddhi Dealer | 170.00 | 195.00 | 72.50 | 292.50 | | | | |

* ಸಿದ್ಧಾರೂಢ ತೋಟಗಾರಿಕೆ ಬೆಳೆಗಾರರ ಸಹಕಾರ ಸೊಸೈಟಿ, ಬೆಳಗಾವಿ ಜಿಲ್ಲೆ ಗೋಕಾಕ ತಾ, ತುಕ್ಕಾನಟ್ಟಿ. (ಮೆ: ಸಮೃದ್ಧಿ ಡೀಲರ್)

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ & ಮಾರುಕಟ್ಟೆ ನಿಗಮ (ನಿ.)
'ಎಫ್' ಬ್ಲಾಕ್, 2ನೇ ಮಹಡಿ,
ಕಾವೇರಿ ಭವನ, ಬೆಂಗಳೂರು-09